(ಸಾಕ್ಷಿಯನ್ನು ದಿಃ 21-9-2019 ರಂದು ಕರೆಸಿ ಪ್ರಮಾಣ ವಚನ ಬೋಧಿಸಿ ಪಾಟಿ ಸವಾಲಿಗೆ ಒಳಪಡಿಸಲಾಯಿತು. )

**ಪಾಟಿ ಸವಾಲುಃ ಪ್ರತಿವಾದಿ ಪರವಾಗಿಃ ಶ್ರೀ ವಿ ಎ ಟಿ ವಕೀಲರಿಂದಃ**

ದಾವಾ ಆಸ್ತಿಯ ಸರ್ವೆ ನಂಬರ ನನಗೆ ನೆನಪಿಲ್ಲ. ದಾವೆ ಸಲ್ಲಿಸಲು ವಕೀಲರಿಗೆ ಮಾಹಿತಿಯನು ನಾನೇ ಕೊಟ್ಟಿರುತ್ತೇನೆ. ನನಗೆ ಕನ್ನಡ ಮತ್ತು ಆಂಗ್ಲ ಭಾಷೆಯನ್ನು ಓದಲು ಮತ್ತು ಬರೆಯಲು ಬರುವುದಿಲ್ಲ. ನಾನು ಸಲ್ಲಿಸಿರುವ ಪ್ರಮಾಣ ಪತ್ರದ ಸಂಗತಿಗಳ ಬಗ್ಗೆ ನನಗೆ ಮಾಹಿತಿ ಇಲ್ಲ ಎಂದರೆ ಸರಿಯಲ್ಲ, ಆದರೆ ನಮ್ಮ ವಕೀಲರು ಓದಿ ಹೇಳಿರುತ್ತಾರೆ. ಅಹಮ್ಮದ್ ಮೊಮಿನ್ ನನ್ನ ಅಜ್ಜ. ನನ್ನ ಅಜ್ಜನ ಹೆಸರನ್ನು ನನಗೆ ಇಟ್ಟಿರುತ್ತಾರೆ. ನನ್ನ ಅಜ್ಜ ಅಹಮ್ಮದ ಮೊಮಿನ್ ರವರಿಗೆ 4 ಜನ ಗಂಡು ಮಕ್ಕಳು ಮತ್ತು 3 ಜನ ಹೆಣ್ಣು ಮಕ್ಕಳು ಇದ್ದರು. ನನ್ನ ಅಜ್ಜ ಅಹಮ್ಮದರವರಿಗೆ 5 ಜನ ಗಂಡು ಮಕ್ಕಳು ಮತ್ತು ಇಬ್ಬರು ಹೆಣ್ಣು ಮಕ್ಕಳು ಎಂದರೆ ಸರಿಯಲ್ಲ. ಅಹಮ್ಮದ ಮೊಮಿನ್ ರವರಿಗೆ ಅಬ್ದುಲ ಗಫುರ ಮೊಮಿನ್, ಅಬ್ದುಲ ರಜಾಕ ಮತ್ತು ಖತೀಜಾ ರವರು ಮಕ್ಕಳಾಗಿರುತ್ತಾರೆ ಎಂದು ನನ್ನ ವಾದ ಪತ್ರದಲ್ಲಿ ಹೇಳಿ ಬರೆಸಿರುವುದಿಲ್ಲ. ಆ ರೀತಿ ಬರೆದಿರುವುದು ತಪ್ಪಾಗಿರುತ್ತದೆ.

ಅಹಮ್ಮದ ಮೊಮಿನರವರ ಹೆಣ್ಣು ಮಕ್ಕಳ ಹೆಸರು ಖತೀಜಾ, ಫಾತೀಮಾ ಮತ್ತು ಇನ್ನೊಬ್ಬಳು. ಆಕೆಯು ತೀರಿಕೊಂಡಿರುತ್ತಾಳೆ. ತೀರಿಕೊಂಡಿರುವ ಹೆಣ್ಣು ಮಗಳ ಹೆಸರು ಕುಲಸುಂಬಿ ಅಂತಾ ಇರುತ್ತದೆ ಎಂದರೆ ಸರಿಯಲ್ಲ. ಅಹಮ್ಮದ ಮೊಮಿನರವರ ಗಂಡು ಮಕ್ಕಳ ಹೆಸರು ಅಬ್ದುಲ ಗಫುರ ಅಹಮ್ಮದ ಮೊಮಿನ್, ಇಸೂಬ್ ಅಹಮ್ಮದ ಮೊಮಿನ, ಯಾಕುಬ ಅಹಮ್ಮದ ಮೊಮಿನ ಮತ್ತು ಅಬ್ದುಲ ರಜಾಕ ಅಹಮ್ಮದ ಮೊಮಿನ. ಕುಲಸುಂಬಿ ಇಕೆಯು ಖತೀಜಾರವರ ಮಗಳು. ಸದರಿ ಕುಲಸುಂಬಿರವರಿಗೆ ಮದುವೆಯಾಗಿರುತ್ತದೆ. ಫಾತೀಮಾ ಇವರು ಖತೀಜಾರವರ ತಂಗಿಯಾಗಿರುತ್ತಾಳೆ. ಪ್ರತಿವಾದಿಯು ಫಾತೀಮಾರವರ ಮಗ ಎಂದರೆ ನಿಜ.

ಈ ಹಂತದಲ್ಲಿ ಕೋರಿಕೆಯ ಮೇರೆಗೆ ಮುಂದುವರಿದ ಪಾಟಿ ಸವಾಲನ್ನು ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸರಿ ಇದೆ

ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು,
ಕಾರವಾರ.